




■ ತೆಲುಗು ಮೂಲ: ಕೌಂಡಿನ್ಯ ಭೋಗರಾಜು

■ ಕನ್ನಡಕ್ಕೆ: ಉಮಾದೇವಿ ನೀಲಾರಂಭಂ

# ಮಂದಾರ ಕನಸು

'ಎಲೇ ಹುಚ್ಚುಮುಂಡೇ! ಅವನೇನೇ ನಿನ್ನನ್ನ ಸಾಯಿಸಿ ಬಿಡಬೇಕೆಂದು ಬಂದವನು! ಅವನ ಜೊತೆಯಲ್ಲೇ ಹೋಗ ಬೇಕೆಂದಿದೆಯಲ್ಲೇ, ತಿಕ್ಲು ಮುಂಡೇದೆ!

ಬೇಡಾ ಬೇಡಾ... ಆ ಕಾರನ್ನು ಹತ್ತ ಬೇಡ..

ಅಯ್ಯೋ! ಹತ್ತೇ ಬಿಟ್ಟೆಯಲ್ಲೇ! ಸಾಯಿ'

ಅಪ್ಪಪ್ಪಾ! ಈ ಟಿ ವಿ ಮುಂಡೇಗಂಡ ಸರಿಯಾಗಿ ಇಂಥಾ ಸಮಯಕ್ಕೇ ನಿಲ್ಲಿಸಿಬಿಡ್ತಾನೆ! ಹಾಳಾದವನು! ಮತ್ತೇ ನಾಳೆ ಮಧ್ಯಾಹ್ನದವರೆಗೂ ಏನಾಗುತ್ತೋ ಗೊತ್ತಾಗಿ ಸಾಯೊಲ್ಲ.

ಟಿ ವಿ ಸೀರಿಯಲ್ಲು ನೋಡುತ್ತಾ, ಅದರಲ್ಲೇ ಲೀನವಾಗಿ ಬಿಟ್ಟ ದುರ್ಗಮ್ಮನವರು ತನ್ನಲ್ಲಿ ತಾನೇ ಒದರಿಕೊಳ್ಳುತ್ತಿದ್ದಾರೆ.

ಲಂಕೆಯಷ್ಟು ದೊಡ್ಡ ಮನೆಯಲ್ಲಿ ಒಂಟಿಯಾಗಿ ಬದುಕುತ್ತಿದ್ದ ದುರ್ಗಮ್ಮನವರಿಗೆ ಸೀರಿಯಲ್ ಪಾತ್ರಗಳೇ ಸ್ನೇಹಿತರು, ನೆಂಟರು, ಇಷ್ಟರು, ಬೇಕಾದವರು, ಬೇಡವಾದವರು ಸಹ.

ಆಗಿನ ಕಾಲದಲ್ಲೇ ಆಕೆ ಪ್ರೇಮ–ವಿವಾಹ ಮಾಡಿಕೊಂಡಿರುವ ಕಾರಣ, ಎರಡು ಕಡೆಯ ಮನೆಗಳವರೂ ಅವರ ಕೈ ಬಿಟ್ಟುಬಿಟ್ಟರು. ಇರೋ ಒಬ್ಬ ಮಗ ಇಂಗ್ಲೆಂಡಲ್ಲಿ ಸ್ಥಿರವಾಸ ಮಾಡಿಕೊಂಡುಬಿಟ್ಟ. ವಾರಕ್ಕೊಂದು ದೂರವಾಣಿ ಸಂಭಾಷಣೆ... ವರ್ಷಕ್ಕೊಂದು ಪ್ರತ್ಯಕ್ಷ ಸಂದರ್ಶನ.

ಆಕೆಗೆ ಎಪ್ಪತ್ತರ ಮೇಲೆ ವಯಸ್ಸಾದರೂ... ಯಾರಾದರೂ ಹುಡುಗರು ವಯಸ್ಸೆಷ್ಟು ಎಂದು ಕೇಳಿದರೆ, 'ಯಾಕೋ! ಮದುವೆಯಾಗ್ತೀಯಾ?' ಎಂದು ಸಿಡಿಮಿಡಿಗೊಳ್ಳುತ್ತಾರೆ. ಹುಡುಗಿಯರು ಕೇಳಿದರೆ, 'ನಿನಗಿಂತ ಚೆನ್ನಾಗಿದೀನಿ ಕಣೇ' ಎಂದು ಜಂಭದಿಂದ ಬೀಗುತ್ತಾರೆ ಆಕೆ.

ಈ ನಡುವೆ ಒಂದು ಸಾರಿ ಆಕೆ ರಿಕ್ಷಾ ಹತ್ತುತ್ತಾ ಜಾರಿ ಬಿದ್ದು ಕಾಲ್ಮೂಳೆ ಮುರಿದಿದ್ದು...(ಆಕೆಯ ಭಾಷೆಯಲ್ಲಿ) ಕಬ್ಬಿಣದ ತುಂಡನ್ನು ಕಾಲಲ್ಲಿ ಇಟ್ಟದ್ದು, ಅದರ ಮೇಲೆ ಟೈಫಾಯಿಡ್ ಆಗಿ, ಆರೋಗ್ಯ ಕ್ಷೀಣಿಸಿದ್ದು...ಅದರಿಂದ ಆಕೆಗೆ ಎಲ್ಲೂ ಹೋಗಲಿಕ್ಕಾಗದಿದ್ದರೂ, ಲೋಕದ ರೀತಿಯನ್ನು ಚೆನ್ನಾಗಿ ಅರಿತು ಕೊಂಡಿದ್ದರು. ದೇವರು ಅವರಿಂದ ಎಷ್ಟು ಕಿತ್ತುಕೊಂಡಿದ್ದರೂ, ಆ ಕಂಚು ಕಂಠವನ್ನು ಮಾತ್ರ ಏನೂ ಮಾಡಲಾಗದೆ ಬಿಟ್ಟನೆಂದು ಆಡಿಕೊಳ್ಳುತ್ತಾರೆಲ್ಲರು!

ಒಂದೊಂದು ಸಾರಿ ಎದುರುಮನೆ ಮಲ್ಲಿಕಾಳ ಗಂಡ ಊಟದ ಡಬ್ಬಿಯನ್ನು ಮರೆತುಬಿಟ್ಟು ಹೊರಟುಬಿಟ್ಟರೆ... ಕೈಯಲ್ಲಿ ಡಬ್ಬಿ ಹಿಡಿದುಕೊಂಡ ಮಲ್ಲಿಕಾ 'ರೀ' ಎಂದು ಓಡುತ್ತಿದ್ದರೆ.. ಅಂಗಳದಲ್ಲಿ ಕಟ್ಟೆಮೇಲೆ ಕುಳಿತಿರುವ ದುರ್ಗಮ್ಮಜ್ಜಿ...'ಇರು ಕಣೇ, ಯಾಕೆ ಓಡುತ್ತೀಯಾ' ಎಂದು ಮಲ್ಲಿಕಾಳನ್ನು ತಡೆದು... 'ಲೋ! ಸುಂದರಾ... ಡಬ್ಬಿ ಮರೆತುಬಿಟ್ಟಿದ್ದೀಯಾ, ವಾಪಸ್ ಬಾರೊ' ಎಂದು ಜೋರಾಗಿ ಕೂಗಿದ ತಕ್ಷಣ ಸುಂದರನ ಸ್ಕೂಟರಷ್ಟೇ ಅಲ್ಲ, ಬೀದಿಯಲ್ಲಿ ಹೋಗುತ್ತಿರುವ ಮಂದಿ ಎಲ್ಲ ಹಿಂದಕ್ಕೆ ತಿರುಗಿ ನಿಂತು ಬಿಡುತ್ತಿದ್ದರು!

ಬೆಳ್ಳಂಬೆಳಗ್ಗೆ ಎದ್ದು ಸ್ನಾನ ಮಾಡಿ, ದೀಪ ಹಚ್ಚಿ, ಬೇಡ ಬೇಡ ಅಂತಿದ್ದರೂ ರಾತ್ರಿ ಉಳಿದಿರುವ ಪಲ್ಯ ಕೆಲಸದವಳ ಮುಖಕ್ಕೆ ಬಿಸಾಕಿ, ಸ್ವಲ್ಪ ಉಪ್ಪಿಟ್ಟು ಮಾಡಿಕೊಂಡು ತಿಂದು, ಟಿ ವಿ ಮುಂದೆ ಕೂತರೆ... ಮಧ್ಯದಲ್ಲಿ ವಾರ್ತೆಗಳ ಸಮಯ ನೋಡಿಕೊಂಡು, ಎದ್ದು ಸ್ವಲ್ಪ ಅನ್ನ, ಸಾರು ಮಾಡಿಕೊಂಡು, ಊಟದ ಶಾಸ್ತ್ರ ಮುಗಿಸಿ, ಸ್ವಲ್ಪ ಹೊತ್ತು ಬೆನ್ನು ಕೆಳಗೆ ಹಾಕ್ತಾರೆ. ಅದೂ, ಯಾವುದಾದರೂ ಹಳೆಯ ಸಿನಿಮಾ ಬರಲಿಲ್ಲ ಎಂದರೆ ಮಾತ್ರ. ಅಕಸ್ಮಾತ್ ಸಾವಿತ್ರಿಯದೋ, ಬಿ.ಸರೋಜಾದೇವಿಯದೋ ಸಿನಿಮಾ ಬಂತಪ್ಪಾ ಎಂದರೆ ಆ ಚಿಕ್ಕ ನಿದ್ದೆಯು ಸಹ ಮಾಡೊಲ್ಲ. ಅಕ್ಕಪಕ್ಕದ ಮನೆಗಳು ಇವರು ಇಡುವ ಸೌಂಡ್ ಗೆ ತತ್ತರಿಸಿ ಬಿಡಬೇಕು. ಯಾರೆಷ್ಟು ಬಡಕೊಂಡರೂ ಇವರು ಕೇಳಿಸಿಕೊಳ್ಳುವುದೂ ಇಲ್ಲ. ಆಕೆಗೆ ಕಿವಿ ಸರಿಯಾಗಿ ಕೇಳುವುದಿಲ್ಲವಲ್ಲಾ!

ವಯಸ್ಸಾದವರು! ಏನು ಮಾಡೋಕ್ಕಾಗುತ್ತೆ ಬಿಡು, ಎಂದು ಅವರೆಲ್ಲಾ ಸುಮ್ಮನಾಗ್ಬಿಡ್ತಾರೆ. ಒಂದು ದಿನ ಸಾಯಂಕಾಲ, ಕರೆಂಟ್ ಹೋಗಿದ್ದರಿಂದ ಕರೆಂಟ್ ಕೊಡುವವನಿಗೆ ಶಾಪ ಹಾಕುತ್ತಾ ಹೊರಗಡೆ ಬಂದ ದುರ್ಗಮ್ಮ ನವರಿಗೆ ಎದುರುಮನೆ ಮಲ್ಲಿಕಾ ಸಿಕ್ಕಿಬಿಟ್ಲು. ಆಕೆ, ಮಲ್ಲಿಕಾಳಿಗೆ, ಗಂಡನನ್ನ ಹದ್ದುಬಸ್ತಿನಲ್ಲಿ ಹೇಗೆ ಇಟ್ಟುಕೋ ಬೇಕು ಎನ್ನುವ ವಿಷಯದಲ್ಲಿ ಭಾಷಣ ಕೊಡುತ್ತಿದ್ದಾಗ ಮಲ್ಲಿಕಾಳ ಮಗಳು ಲಲಿತಾ ಕಾಲೇಜಿನಿಂದ ಮನೆಗೆ ಬಂದಳು. ದುರ್ಗಮ್ಮಜ್ಜಿಯನ್ನು ನೋಡಿ ಹೆದರಿಕೊಂಡು ಮೆಲ್ಲಗೆ ಜಾರಿಕೊಳ್ಳುತ್ತಿದ್ದಾಗ ದುರ್ಗಮ್ಮ ನೋಡಿಯೇಬಿಟ್ಟರು.

'ಲಲಿತಾ' ಎಂದು ಜೋರಾಗಿ ಕೂಗಿ, 'ಗಂಡು ಬೀರಿ ಹಾಗೆ ಆ ಷರಟು, ಪ್ಯಾಂಟು ಹಾಕಿಕೊಳ್ಳದೆ ಲಕ್ಷಣವಾಗಿ ಸೀರೆ ಉಟ್ಟುಕೊಂಡು ಹೋಗ್ಬಾರದೇನೇ. ಹೆಣ್ಣುಮಕ್ಕಳು ತೀರಾ ಕೆಟ್ಹೋಗ್ತಿದಾರೆ. ತಾಯಿ ಬುದ್ಧಿವಾದ ಹೇಳಿದರೆ ತಾನೆ? ಇದಕ್ಕೆಲ್ಲ ಮಲ್ಲಿಕಾನೆ ಹೊಣೆ ಅಂತ ಶುರು ಆಗುವ ಹೊತ್ತಿಗೆ, ಲಲಿತಾ ಅವರ ಕೈಯಲ್ಲಿ ಒಂದು ದಾಸವಾಳದ ಗಿಡವನ್ನಿಟ್ಟು, ಇದನ್ನಿಟ್ಟುಕೊಂಡು ನನ್ನನ್ನು ಬಿಟ್ಟುಬಿಡಿ ಅಜ್ಜಿ ಎನ್ನುವ ಹಾಗೆ ಒಳಕ್ಕೆ ಓಡಿದಳು.

'ಸರಿ ಕಣೇ, ಈ ಗಿಡ ಏನು?' ಎಂದು ಅಜ್ಜಿ ಕೇಳಿದ್ದಕ್ಕೆ,'ಕಾಲೇಜ್ ನಲ್ಲಿ ಪರಿಸರದದ ಸುಧಾರಣೆಯ ಬಗ್ಗೆ ಏನೋ ಕಾರ್ಯಕ್ರಮಗಳು ನಡೀತಾ ಇವೆಯಂತೆ. ಅದರ ಪ್ರಯುಕ್ತ ಎಲ್ಲರಿಗೂ ಗಿಡಗಳನ್ನು ಕೊಡ್ತಿದಾರಂತೆ. ಅದರಲ್ಲಿ ನಿಮಗೂ ಒಂದು ಕೊಟ್ಟಿರಬೇಕು' ಎಂದಳು ಮಲ್ಲಿಕಾ.

'ಇದನ್ನ ನಾನೇನು ಮಾಡಿಕೊಳ್ಳಲಿ? ಒಂದು ಕುಂಡವಿಲ್ಲ, ಮಣ್ಣಿಲ್ಲ' ಎನ್ನುವಷ್ಟು ಹೊತ್ತಿಗೆ, ಮಲ್ಲಿಕಾಳೇ, ಅವರು ಗಿಡಗಳಿಗಾಗಿ ಇಟ್ಟುಕೊಂಡಿರುವ ಒಂದು ಪಾಟನ್ನು ಮಣ್ಣಿನ ಸಮೇತ ಕೊಟ್ಟು, ಅದರಲ್ಲಿ ಆ ಗಿಡವನ್ನು ನೆಟ್ಟು, ದುರ್ಗಮ್ಮನವರ ಮನೆಯ ಮುಂದುಗಡೆ ಕೋಣೆಯ ಕಿಟಕಿಯ ಬಳಿ ಇಟ್ಟು, 'ಇಲ್ಲಾದರೆ ಗಾಳಿ, ಬೆಳಕು ಚೆನ್ನಾಗಿ ಬರುತ್ತೆ. ಚೆನ್ನಾಗಿ ಬೆಳೆಯುತ್ತೆ. ಇನ್ನು ಮೇಲೆ ನೀವು ಈ ಗಿಡದ ಜೊತೆಯಲ್ಲೇ ಚೆನ್ನಾಗಿ ಕಾಲ ಕಳೆಯಬಹುದು' ಎಂದು ಬಿಟ್ಟು, ಮತ್ತೆ ಹಾಗೆಲ್ಲ ಅನ್ನಬಾರದಿತ್ತೆಂದೆನ್ನಿಸಿ, ನಾಲಿಗೆ ಕಚ್ಚಿಕೊಂಡು ಅಲ್ಲಿಂದ ಹೊರಟು ಹೋದಳು ಮಲ್ಲಿಕಾ.

ಯಾವ ಕಾಲದಲ್ಲೋ ಗಿಡಗಳನ್ನು ಬೆಳೆಸಿದೀನಿ. ಮದುವೆ ಆಗಿ, ಮಗು ಹುಟ್ಟೋವರೆಗೂ ಬೆಳೆಸಿದ್ದೆ... ಈವಾಗ... ಇರಲಿ ಬಿಡು, ಒಂದು ಕಡೆ ಬಿದ್ದಿರುತ್ತೆ....ಎಂದುಕೊಂಡರು ದುರ್ಗಮ್ಮನವರು.

ದಿನಾ ಅವರು ತಿಂಡಿ, ಊಟ ತಿಂದಾಗಲೆಲ್ಲಾ, ಮೂರು ಹೊತ್ತೂ ಅದಕ್ಕೂ ಸ್ವಲ್ಪ ನೀರು ಹಾಕುತ್ತಿದ್ದರಷ್ಟೆ. ಎಲ್ಲರ ಮನೆಗಳಿಗೂ ಲಲಿತಾ ಅವೇ ಗಿಡಗಳನ್ನು ಕೊಟ್ಟಳು. ಆದರೆ ಕೆಲವರ ಮನೆಗಳಲ್ಲಿ ಅವು ಒಣಗಿ ಹೋಗಿವೆ. ಇನ್ನೂ ಕೆಲವರ ಮನೆಗಳಲ್ಲಿ ಸೋತಂತೆ ಬೆಳೆಯುತ್ತಿವೆ.

ಆದರೆ ದುರ್ಗಮ್ಮಜ್ಜಿಯ ಮನೆಯಲ್ಲಿ ಗಿಡವನ್ನು ನೋಡಿ ಅಚ್ಚರಿ ಗೊಂಡಿದ್ದಳು ಲಲಿತಾ. 'ಆಗಲೇ ಎಷ್ಟು ದೊಡ್ಡದಾಯಿತು! ಇಷ್ಟರಲ್ಲೇ ಒಳ್ಳೆಯ ಹೂಗಳು ಬಿಡುತ್ತದೆ' ಎಂದು ಹೊಗಳುತ್ತಿದ್ದಂತೆಯೆ ದುರ್ಗಮ್ಮನವರಿಗೆ ತುಂಬಾ ಖುಷಿ ಆಯಿತು.

ತುಂಬಾ ಕಾಲದ ನಂತರ ಅವತ್ತು ರಿಕ್ಷಾದಲ್ಲಿ ಪೇಟೆಯಕಡೆ ಹೋಗಿ ಒಳ್ಳೆಯ ಕುಂಡವನ್ನು ತಂದು ಗಿಡವನ್ನು ಅದಕ್ಕೆ ಬದಲಾಯಿಸಿದರು. ಎಲ್ಲಿ ಸೊಟ್ಟಗೆ ಬೆಳೆಯುತ್ತೋ ಅಂತ ಕಿಟಕಿಗೆ ಸೇರಿಸಿ ಒಂದು ದಾರವನ್ನೂ ಕಟ್ಟಿದ್ದರು. ಈರುಳ್ಳಿ ಹೊಟ್ಟು, ಮಣ್ಣು, ಸಗಣಿ ಸೇರಿಸಿ ಗಿಡಕ್ಕೆ ಹಾಕಿಸಿದರು. ಆವಾಗಲಿಂದ ಆ ಗಿಡವೇ ಅವರ ಲೋಕವಾಯಿತು. ಅದಕ್ಕೆ 'ಮಂದಾರ' ಎಂದು ಹೆಸರಿಟ್ಟರು.

ತಾನು ಓದಿರುವ ಕಥೆಗಳು, ಕವನಗಳು, ಬಾಲ್ಯಾನುಭವಗಳು, ತನ್ನ ಮದುವೆಯ ಸಮಯದ ಸಂಗತಿಗಳು.... ಎಲ್ಲವೂ ಮಂದಾರದ ಜೊತೆಯಲ್ಲೇ ಹಂಚಿಕೊಳ್ಳುತ್ತಿದ್ದರು. ಬೆಳಗ್ಗೆ ಗ್ರಹಫಲದೊಂದಿಗೆ ಶುರುವಾಗಿ, ರಾತ್ರಿ ವಾರ್ತೆಗಳ ವರದಿಯಾಗಿ, ಅವರ ಸಂಭಾಷಣೆ ಮುಗಿಯುತ್ತಿತ್ತು. ಕೆಲವು ತಿಂಗಳಾಗುವ ವೇಳೆಗೆ ಟಿ ವಿ ಸೀರಿಯಲ್ಲುಗಳ ಸಹವಾಸವೇ ಮರೆತುಬಿಟ್ಟರಾಕೆ. ಅಕ್ಕಪಕ್ಕದವರೆಲ್ಲಾ ಪ್ರಶಾಂತವಾಗಿದ್ದರು.

ಈ ವರ್ಷ ತನಗೆ ಬರೋದಕ್ಕಾಗುವುದಿಲ್ಲವೆಂದು ಮಗ ಫೋನ್ ಮಾಡಿದಾಗ ಒಂದು ಗಂಟೆ ಹೊತ್ತು ಬೇಜಾರು ಮಾಡಿಕೊಂಡು ಕೊರಗಿ, ಆಮೇಲೆ 'ಮಂದಾರ' ದ ಹತ್ತಿರ ಹೇಳಿಕೊಂಡು......'ಇರಲಿ ಬಿಡು, ನನಗಾಗಿ ನೀನಿದಿಯಲ್ಲಾ' ಎಂದು ಕಣ್ಣೀರು ತುಂಬಿಕೊಂಡು ಮಂದಾರವನ್ನು ಆಲಿಂಗಿಸಿಕೊಂಡರು.

'ಹಾಸಿಗೆಯನ್ನು, ಮಂಚವನ್ನು ಮುಂದಿನ ಕೋಣೆಗೆ ಯಾಕೆ ಬದಲಾಯಿಸಿದಿರಿ' ಎಂದು ಮಲ್ಲಿಕಾ ಕೇಳಿದಾಗ – ರಾತ್ರಿ ಹೊತ್ತಲ್ಲಿ ಮಂದಾರ ಒಂಟಿಯಾಗಿ ಹೇಗಿರ್ತಾಳೆ ಎಂದು ಕೇಳಿದಳು. ಆಗ ಮಲ್ಲಿಕಾಳಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಆದರೆ, ಬೀದಿಯಲ್ಲಿರುವ ಕೆಲವರ ಮನೆಗಳ ಗಿಡಗಳಲ್ಲಿ ಮೊಗ್ಗುಗಳು ಕಾಣಿಸುತ್ತಿತ್ತು. ಆದರೆ, ಎಲ್ಲರ ದೃಷ್ಟಿ ಇವರ ಮಂದಾರದ ಮೇಲೆಯೇ ಇತ್ತು. 'ಇನ್ನೂ ಒಂದು ಮೊಗ್ಗಾದರೂ ಬರಲಿಲ್ಲ. ಒಳ್ಳೆಯ ಜಾತಿಯ ಗಿಡಗಳಷ್ಟೇನು, ಜಾಸ್ತಿ ಹೂ ಬಿಡೊಲ್ಲ. ಒಂದೋ, ಎರಡೋ ಹೂ ಬಿಡುತ್ತಷ್ಟೇ' ಎಂದು ಕೆಲಸದವಳು ಸಾಂತ್ವನ ಹೇಳಿದಾಗ ನಗು ಬಂತು ದುರ್ಗಮ್ಮನವರಿಗೆ.

ಇನ್ನೂ ಒಳ್ಳೆಯ ಮಣ್ಣು, ಗೊಬ್ಬರ, ಹೊಸ ಕುಂಡದಲ್ಲಿ ತರಿಸಿ ಮಂದಾರದ ನೆಲೆಯನ್ನು ಬದಲಾಯಿಸಿದ್ದರು ದುರ್ಗಮ್ಮ. ದಿನಕ್ಕೆ ನಾಲ್ಕು ಸಾರಿ ನೀರು ಹಾಕುತ್ತಿದ್ದರು. ಆದರೂ ಪ್ರಯೋಜನವಿರಲಿಲ್ಲ. ಎಲ್ಲರ ಮನೆಗಳಲ್ಲಿ ಹೂವು ಬಿಡುವುದು, ಅವು ಹೆಣ್ಣು ಮಕ್ಕಳ ಜಡೆಗಳಲ್ಲಿ ಮೆರೆದಿದ್ದು, ದೇವರ ಮನೆಗಳಲ್ಲಿ ಕಂಗೊಳಿಸಿದ್ದು ಆಯಿತು. 'ಮಂದಾರ' ಮಾತ್ರ ಇನ್ನೂ ಹೂವೇ ಬಿಟ್ಟಿಲ್ಲ.

ದುರ್ಗಮ್ಮ ಜಗುಲಿಯ ಮೇಲೆ ಕೂತುಕೊಂಡಾಗ ಆ ಕಡೆ ಹೋಗುವವರು, 'ಏನಜ್ಜೀ, ಮಂದಾರ ಇನ್ನೂ ಹೂವು ಬಿಟ್ಟಿಲ್ವಾ?' ಎಂದು ಕೇಳಿದರೆ, 'ಆ ವಿಧವೆ ಮುಂಡೇದು ಹೂವೇನು ಮಾಡುಕೊಳ್ಳುತ್ತೆ ಎಂದು ಅದಕ್ಕೂ ಗೊತ್ತಾಗಿ